(1) in the entries relating to the category of posts of Sub-Inspector of Police (Civil) at serial number 10, for the entries in column (6), under the heading "(a) age limit" the following shall be substituted, namely:-

"Notwithstanding anything contained in rule 6(2-A) of the Karnataka Civil Services (General Recruitment) Rules 1977, the candidate as on the last date of the receipt of application for appointment to the post must have attained the age of 21 years but not have attained the age of,

(1) 30 years in the case of persons belonging to the Scheduled Castes, the Scheduled Tribes and other Backward Classes; and

(2) 28 years in the case of other candidates:

Provided that in the case of the candidate who is an ex-serviceman discharged from service by reason of demobilization, retrenchment or retirement, age limit shall be relaxed by the number of years of military service rendered by him plus additional three years. However, ex-servicemen who have previously availed benefit of ex-servicemen reservation for any Government service shall not be eligible to avail the benefit again under these rules."

(2) in the category of posts of "Police Constable (Civil), (Men and Women)" at serial number 14, in column (6),

(i) under the heading "(2) Age Limit" after item (2), the following shall be inserted, namely:-

"(3) thirty years in the case of Tribals staying in the Forest areas of Karnataka.

(ii) in serial number (3), in sub-item (ii), the following proviso shall be inserted, namely:-

"Provided that in case of Tribals staying in the Forest areas of Karnataka, the Physical Standard shall be as follows:-

For Men:

Height - 155 Cms

Chest - 75 Cms (Fully expanded with a minimum expansion of 5 cms)"

For Women:

Height - 150 Cms

Explanation:- For the purpose of said rules, tribal means "Candidates belonging to any of the tribal communities of Siddis, Jenukuruba, Kadukuruba, Yerava, Soliga, Kudiya, Gowdlu, Hasalaru, Malaikudiya and Koraga in the forests of Uttara Kannada-Karwar, Dakshina Kannada-Mangalore, Udupi, Chickmagalur, Shimoga, Kodagu, Chamarajanagara and Mysore".

(3) in the category of post of Chief Administrative Officer at serial number 85, in column (6), the following proviso shall be inserted, at the end, namely:-

"Provided that for a period of three years from the date of commencement of the Karnataka State Police including Ministerial Service (Recruitment) (Amendment) Rules 2014, if persons who has put in a service of not less than three years in the cadre of Administrative Officer is not available, persons who has put in service of not less than one year may be considered for promotion."

By Order and in the name of Governor of Karnataka,

Govinda Swamy

Under Secretary to Government

Home Department, (Law & Order)

NOTIFICATION-II

No: HD 2 POSIAA 2014, Bangalore, Dated: 26.08.2014

The draft of the following rules further to amend the Karnataka State Reserve Police (Recruitment and Conditions of Service) Rules 2009, which the Government of Karnataka proposes to make in exercise of the powers conferred by the sub-section (1) of the section 3 read with section 8 of the Karnataka State Civil Services Act, 1978 (Karnataka Act 14 of 1990) was published as required by clause (a) of sub-section (2) of section 3 of the said Act, in Notification No. HD 2 POSIAA 2014, Bangalore Dated 25.07.2014 in Part IV-A of the Karnataka Gazette dated 07.08.2014 inviting objections / suggestions from persons likely to be affected thereby within 15 days from the date of the publication in the Official Gazette.

Whereas the said Gazette was made available to the public on 07.08.2014.

And whereas as no objections and suggestions have been received within the specified period.

Now, therefore, in exercise of the powers conferred by sub-section (1) of Section 3 read with section 8 of the Karnataka Civil Services Act, 1978 (Karnataka Act 14 of 1990), the Government of Karnataka hereby makes the following rules namely:-

RULES

1. **Title and commencement**:- (1) These rules may be called the Karnataka State Reserve Police (Recruitment and Conditions of Service) 2nd Amendment Rules 2014.

(2) They shall come into force from the date of their publication in the Official Gazette.

2. **Amendment of schedule**:- In the Karnataka State Reserve Police (Recruitment and Conditions of Service) Rules, 2009, in the schedule:-

(i) in the entries relating to the category of posts of Assistant Commandant at serial number 7, for column (6) and the entries relating thereto, the following shall be substituted, namely:-

"Thirty three one third percent by direct recruitment; and Sixty six two third percent by promotion from the cadre of Reserve Police Inspector.

Method of selection by Direct Recruitment:- The Director Recruitment shall be made in accordance with the procedure in the Karnataka Recruitment of Gazetted Probationers (Appointment by Competitive Examinations) Rules, 1997.

Candidates who are selected by the K.P.S.C. for the post of Assistant Commandant under the above rules shall appear for Physical Standard Test.

Only those who are qualified in Physical Standard Test shall be eligible to appear for the viva voce.

Candidates who remain absent for Physical Standard Test shall be disqualified.

The Physical Standard Test shall be conducted by a committee constituted for the said purpose. The committee shall consist of the following namely:-

(i) An Inspector General of Police, KSRP as Chairman

(ii) A Deputy Inspector General of Police, KSRP as Member

(iii) A Commandant of KSRP as Member Secretary nominated by Director General and Inspector General of Police

The committee shall conduct Physical Standard Test and submit the results to the KPSC

The Committee shall notify the date, time and place of holding the Physical Standard Test."

(ii) in the entries relating to category of posts of Special Reserve Police Inspector (Men) and Special Reserve Police Inspector (Women) at serial number 8, for the entries in column (7), the following shall be substituted, namely:-

"Must have put in a service of not less than eight years in the cadre of Special Reserve Police Sub-Inspectors (Men), Special Reserve Police Sub-Inspectors (Women) as the case may be, in the Karnataka State Reserve Police;

Provided that, if no officers who have put in a service of not less than eight years are available, officers who have put in a service of not less than five years may be considered for promotion."

(iii) in the entries relating to the category of post of Special Reserve Police Constable (Men) at serial number 15, in the column (6), under the heading "Physical Standard Test" for the words, letters and brackets "The Endurance Test and Physical Standard Test for each district conducted by a committee consisting of an Deputy Inspector General of Police, K.S.R.P. (Chairman) and two members (Commandants to be nominated by D.G. & I.G.P.)" the following shall be substituted, namely:-

"The Endurance Test and Physical Standard Test for each district conducted by a committee consisting of an Deputy Inspector General of Police, KSRP (Chairman) or any officers not below the rank of Deputy Inspector General of Police (to be nominated by the DG & IGP as Chairman) and two members (Commandants or any other officers not below the rank of Superintendent of Police to be nominated by the DG & IGP)

(iv) in the entries relating to the category of post of Special Reserve Police Constable (Women) at serial number 16, in the column (6), under the heading "Physical Standard Test" for the words, letters and brackets "The Endurance Test and Physical Standard Test for each district conducted by a committee consisting of an Deputy Inspector General of Police, K.S.R.P. (Chairman) and two

members (Commandants to be nominated by D.G. & I.G.P.)" the words " The Endurance Test and Physical Standard Test for each district conducted by a committee consisting of an Deputy Inspector General of Police, KSRP (Chairman) or any officers not below the rank of Deputy Inspector General of Police (to be nominated by the DG & IGP as Chairman) and two members (Commandants or any other officers not below the rank of Superintendent of Police to be nominated by the DG & IGP) " shall be substituted.

By Order and in the name of Governor of Karnataka,

Govinda Swamy
Under Secretary to Government
Home Department, (Law & Order)

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೨೮, ೨೦೧೪ (ಭಾದ್ರಪದ ೬, ಶಕ ವರ್ಷ ೧೯೩೬)	ನಂ. ೫೩೭
Part – IV-A	**Bangalore, Thursday, August 28, 2014 (Bhadrapada 6, Shaka Varsha 1936)**	**No. 537**

PARLIAMENTARY AFFAIRS AND LEGISLATION SECRETARIAT

NOTIFICATION

No. DPAL 09 SAMVYAVI 2014, Bangalore, Dated : 28.08.2014

The following Order made by the Governor is hereby published for general information:-

"ORDER - I

In exercise of the powers conferred upon me by sub-clause (a) of clause (2) of Article 174 of the Constitution of India, I, K. Rosaiah, Governor of Karnataka, do hereby prorogue the Karnataka Legislative Council.

K. ROSAIAH
GOVERNOR OF KARNATAKA"

By order and in the name of the Governor of Karnataka,

S.B. GUNJIGAVI
Secretary to Government
Department of Parliamentary Affairs and Legislation

PARLIAMENTARY AFFAIRS AND LEGISLATION SECRETARIAT

NOTIFICATION

No. DPAL 09 SAMVYAVI 2014, Bangalore, Dated : 28.08.2014

The following Order made by the Governor is hereby published for general information:-

"ORDER - II

In exercise of the powers conferred upon me by sub-clause (a) of clause (2) of Article 174 of the Constitution of India, I, K. Rosaiah, Governor of Karnataka, do hereby prorogue the Karnataka Legislative Assembly.

K. ROSAIAH
GOVERNOR OF KARNATAKA"

By order and in the name of the Governor of Karnataka,

S.B. GUNJIGAVI
Secretary to Government
Department of Parliamentary Affairs and Legislation

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೨೮, ೨೦೧೪ (ಭಾದ್ರಪದ ೬, ಶಕ ವರ್ಷ ೧೯೩೬)	ನಂ. ೫೩೮
Part – IV-A	**Bangalore, Thursday, August 28, 2014 (Bhadrapada 6, Shaka Varsha 1936)**	**No. 538**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 20 ಶಾಸನ 2014, ಬೆಂಗಳೂರು, ದಿನಾಂಕ: 28–08–2014

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳು (ಪ್ರವೇಶ, ನಿಯಂತ್ರಣ ಮತ್ತು ಶುಲ್ಕ ನಿಗಧಿ) (ವಿಶೇಷ ಉಪಬಂಧಗಳು) ವಿಧೇಯಕ, 2014 ಇದಕ್ಕೆ 2014ರ ಆಗಸ್ಟ್ ಇಪ್ಪತ್ತೈದನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:29 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014 ರ ಕರ್ನಾಟಕ ಅಧಿನಿಯಮ ಸಂಖ್ಯೆ:29

(2014ರ ಆಗಸ್ಟ್ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2014

(2014ರ ಆಗಸ್ಟ್ ಇಪ್ಪತ್ತೈದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲು ಪ್ರಸ್ತಾವಿಸಲಾದ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005 (6) ಎಸ್‌ಸಿಸಿ 537 ರಲ್ಲಿ ವರದಿಯಾದ ಪಿ.ಎ. ಇನಾಂದಾರ್ ಮತ್ತು ಇತರರು – ವಿರುದ್ಧ – ಮಹಾರಾಷ್ಟ್ರ ರಾಜ್ಯ – ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಇತರ ಉದ್ದೇಶಗಳಿಗಾಗಿ, ಕರ್ನಾಟಕದ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ 2006–07, 2007–08, 2008–09, 2009–10, 2010–11, 2011–12, 2012–13, 2013–14 ಮತ್ತು 2014–15ನೇ ವರ್ಷಗಳಲ್ಲಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ ರಾಜ್ಯ ಸರ್ಕಾರವು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ಹಾಗೂ 2014–15ನೇ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಶುಲ್ಕ ನಿಗದಿಗಾಗಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು (2006ರ ಕರ್ನಾಟಕ ಅಧಿನಿಯಮ 8) ತಡೆಹಿಡಿಯಬೇಕೆಂದು ಅಭಿಪ್ರಾಯ ಪಟ್ಟಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.– (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ರಲ್ಲಿ (2006ರ ಕರ್ನಾಟಕ ಅಧಿನಿಯಮ 8) ಏನೇ ಒಳಗೊಂಡಿದ್ದರೂ 2014–15ನೇ ಶೈಕ್ಷಣಿಕ ವರ್ಷಕ್ಕಾಗಿ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶಗಳು ಮತ್ತು ಶುಲ್ಕ ನಿಗದಿಯು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನಡೆಯತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,–

(ಎ) "ಸಾಮಾನ್ಯ ಪ್ರವೇಶ ಪರೀಕ್ಷೆ" ಎಂದರೆ, ಏಕಗವಾಕ್ಷಿ ಪ್ರಕ್ರಿಯೆಯ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ ಅಭ್ಯರ್ಥಿಗಳ ಅರ್ಹತೆಯನ್ನು (ಮೆರಿಟ್) ನಿರ್ಧರಿಸುವುದಕ್ಕಾಗಿ ನಡೆಸಲಾಗುವ ಪ್ರವೇಶ ಪರೀಕ್ಷೆ ಮತ್ತು ತರುವಾಯದ ಕೇಂದ್ರೀಕೃತ ಕೌನ್ಸಿಲಿಂಗ್ ವ್ಯವಸ್ಥೆ;

(ಬಿ) "ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಏಜೆನ್ಸಿ;

(ಸಿ) "ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ" ಎಂದರೆ, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಮತ್ತು ಶುಲ್ಕ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ತಮ್ಮ ನಡುವೆ ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದ;

(ಡಿ) "ಸಂಸ್ಥೆ" ಎಂದರೆ, ವೃತ್ತಿ ಶಿಕ್ಷಣ ಕೋರ್ಸ್‌ಗಳ ವಿದ್ಯಾಭ್ಯಾಸ ನೀಡುತ್ತಿರುವ ವೃತ್ತಿ ಶಿಕ್ಷಣ ಸಂಸ್ಥೆಗಳು;

(ಇ) "ಏಕ ಸದಸ್ಯ ನಿಯಂತ್ರಕ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಸಮಿತಿ;

(ಎಫ್) "ವೃತ್ತಿ ಶಿಕ್ಷಣ ಕೋರ್ಸುಗಳು" ಎಂದರೆ,–

(i) ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ,–

(ಎ) ಬ್ಯಾಚುಲರ್ ಆಫ್ ಮೆಡಿಸಿನ್ ಮತ್ತು ಬ್ಯಾಚುಲರ್ ಆಫ್ ಸರ್ಜರಿ; ಮತ್ತು

(ಬಿ) ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ

(ii) ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ,–

(ಎ) ಬ್ಯಾಚುಲರ್ ಆಫ್ ಇಂಜಿನಿಯರಿಂಗ್;

(ಬಿ) ಬ್ಯಾಚುಲರ್ ಆಫ್ ಟೆಕ್ನಾಲಜಿ;

(ಸಿ) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್; ಮತ್ತು

(iii) ವೈದ್ಯಕೀಯ ಮತ್ತು ದಂತ ವಿಜ್ಞಾನಗಳ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೊಮ ಕೋರ್ಸುಗಳು; ಮತ್ತು

(iv) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಇತರ ಕೋರ್ಸುಗಳು.

(ಜಿ) "ಅನುದಾನಿತವಲ್ಲದ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸದ ಯಾವುದೇ ಖಾಸಗಿ ಆಡಳಿತವುಳ್ಳ ವೃತ್ತಿ ಶಿಕ್ಷಣ ಸಂಸ್ಥೆ.

3. ಏಕ ಸದಸ್ಯ ನಿಯಂತ್ರಕ ಸಮಿತಿಯ ರಚನೆ.– ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ಮಾಜಿ ಕುಲಪತಿಯವರು ಸದಸ್ಯರಾಗಿರುವ, ರಾಜ್ಯ ಸರ್ಕಾರವು ನೇಮಿಸಿದ ಒಂದು ಏಕ ಸದಸ್ಯ ನಿಯಂತ್ರಕ ಸಮಿತಿಯು ಇರತಕ್ಕದ್ದು. ಸದರಿ ಏಕಸದಸ್ಯ ನಿಯಂತ್ರಕ ಸಮಿತಿಯು, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶದ ಪರಿಣಾಮಕಾರಿ ಅನುಷ್ಠಾನದ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಮಾಡಿಕೊಂಡ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದದ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

4. ಶುಲ್ಕದ ನಿಗದಿ.– ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ ನಿಗದಿಪಡಿಸಿದ ಶುಲ್ಕ ಏನೇ ಇದ್ದರೂ, ರಾಜ್ಯ ಸರ್ಕಾರವು, ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದ ಅನುಸಾರವಾಗಿ, ಅಧಿಸೂಚನೆಯ ಮೂಲಕ, ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಸಂದಾಯಮಾಡಬೇಕಾದ ಶುಲ್ಕವನ್ನು ನಿಗದಿಗೊಳಿಸಬಹುದು. ಬೇರೆ ಬೇರೆ ಪ್ರವರ್ಗದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶುಲ್ಕದ ದರವನ್ನು ನಿಗದಿಗೊಳಿಸಬಹುದು.

5. ಪ್ರವೇಶ ನಿಯಂತ್ರಣ ಮತ್ತು ಸೀಟು ಹಂಚಿಕೆ ಪ್ರಮಾಣ.– ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳನ್ನು ಈ ಮುಂದಿನ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು, ಎಂದರೆ:–

(i) 2014–15ನೇ ವರ್ಷಕ್ಕೆ, ಸರ್ಕಾರವು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಡಿಯಲ್ಲಿ ಒಪ್ಪಬಹುದಾದ ಅಂಥ ಸಂಖ್ಯೆಯ ಸೀಟುಗಳನ್ನು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ ನಿಯಮಗಳು, 2006ಕ್ಕೆ ಅನುಸಾರವಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ ಘಟಕದ ಮೂಲಕ ತುಂಬತಕ್ಕದ್ದು.

(ii) ಉಳಿದ ಸೀಟುಗಳನ್ನು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಲ್ಲಿ ಅನ್ಯಥಾ ನಿರ್ದಿಷ್ಟಪಡಿಸಿದ ಹೊರತು, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ನಿರ್ಧರಿಸಲಾದ ಅರ್ಹತೆಯ ಆಧಾರದ ಮೇಲೆ ನ್ಯಾಯಯುತ ಹಾಗೂ ಪಾರದರ್ಶಕ ಮತ್ತು ಶೋಷಣೆಗೊಳಗಾಗದ ರೀತಿಯಲ್ಲಿ ಹಾಗೂ ಕೇಂದ್ರೀಕೃತ ಕೌನ್ಸಿಲಿಂಗ್ ನಡೆಸುವ ಮೂಲಕ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ಅಥವಾ ಸಂದರ್ಭಾನುಸಾರವಾಗಿ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳ ಸಂಘವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ತುಂಬತಕ್ಕದ್ದು.

(2) ರಾಜ್ಯ ಸರ್ಕಾರದ ಮೀಸಲಾತಿ ನೀತಿ ಮತ್ತು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು, ವಿವಿಧ ಪ್ರವರ್ಗದ ಸಂಸ್ಥೆಗಳ ಸಂಬಂಧದಲ್ಲಿ ವಿವಿಧ ಪ್ರವರ್ಗದ ವಿದ್ಯಾರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದವರು ಹಾಗೂ ಆಡಳಿತ ಮಂಡಳಿಯವರು ತುಂಬಬೇಕಾದ ಸೀಟುಗಳ ಹಂಚಿಕೆ ಪ್ರಮಾಣವನ್ನು ಅಧಿಸೂಚನೆಯ ಮೂಲಕ ಪ್ರಕಟಿಸಬಹುದು.

6. ಈ ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು.– ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದವನ್ನು ಉಲ್ಲಂಘಿಸಿ ಯಾವುವೇ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು 2014–15ನೇ ಶೈಕ್ಷಣಿಕ ವರ್ಷಕ್ಕಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಮಾಡಿದ ಎಲ್ಲ ಪ್ರವೇಶಗಳು ಅಸಿಂಧುವಾಗಿರತಕ್ಕದ್ದು. ಅಂಥ ಉಲ್ಲಂಘನೆಯ ಸಂಬಂಧದಲ್ಲಿ, ರಾಜ್ಯ ಸರ್ಕಾರವು ಅಂಥ ಪ್ರವೇಶಗಳನ್ನು ಅಥವಾ ಸಂದರ್ಭಾನುಸಾರವಾಗಿ ಅಂಥ ಸಂಸ್ಥೆಯ ಸಂಯೋಜನೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

7. ತೊಂದರೆಗಳನ್ನು ನಿವಾರಿಸುವ ಅಧಿಕಾರ.– ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

8. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅಧಿವೇಶನದಲ್ಲಿರುವಾಗ, ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರವಾಗಿ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೨೮, ೨೦೧೪ (ಭಾದ್ರಪದ ೬, ಶಕ ವರ್ಷ ೧೯೩೬)	ನಂ. ೫೩೯
Part – IV-A	**Bangalore, Thursday, August 28, 2014 (Bhadrapada 6, Shaka Varsha 1936)**	**No. 539**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 24 ಶಾಸನ 2014, ಬೆಂಗಳೂರು, ದಿನಾಂಕ: 28–08–2014

ದಿ ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಅಂಡ್ ಸರ್ಟೇನ್ ಅದರ್ ಲಾ (ಅಮೆಂಡ್‌ಮೆಂಟ್) ಬಿಲ್, 2014ಕ್ಕೆ 2014ರ ಆಗಸ್ಟ್ ತಿಂಗಳ 25ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:27 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 27 OF 2014

(First Published in the Karnataka Gazette Extra-ordinary on the Twenty eighth day of August 2014)

THE KARNATAKA LAND REFORMS AND CERTAIN OTHER LAW (AMENDMENT) ACT, 2014

(Received the assent of the Governor on the Twenty fifth day of August 2014)

An Act further to amend the Karnataka Land Reforms Act, 1961 and the Karnataka Land Revenue Act, 1964.

Whereas it is expedient further to amend the Karnataka Land Reforms Act, 1961 (Karnataka Act 10 of 1962) and the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the sixty fifth year of the Republic of India, as follows:-

1. Short title and commencement.- (1) This Act may be called the Karnataka Land Reforms and Certain Other Law (Amendment) Act, 2014.

(2) It shall come into force at once.

2. Amendment of Karnataka Act 10 of 1962.- In the Karnataka Land Reforms Act, 1961 (Karnataka Act 10 of 1962) in section 109,-

(i) after sub-section(1A), the following shall be inserted, namely:-

"(IB) in cases where the land in any area, cannot be utilized for the purpose of industrial development, educational institutions, Places of worship, a Housing Project approved by the State Government or Horticulture purpose under sub-section (1) within the prescribed time, such land shall be surrendered to the land bank of the Government, failing which the exemption shall be cancelled and same be forfeited to the Government without paying compensation."

(ii) after sub-section (2) the following proviso shall be inserted, namely:-

"Provided that, any of the Company or Organization, after a period of seven years from the date of obtaining permission under section 109, for the purpose of expansion of project or to tide over the financial crisis or for changing of land usages, submit application, which shall be considered by the High Power Committee headed by the Chief Secretary to Government subject to such conditions as deemed fit on case to case basis."

3. Amendment of Karnataka Act 12 of 1964.- In the Karnataka Land Revenue Act, 1964, (Karnataka Act 12 of 1964) in section 95, after sub-section (7), before explanation, the following shall be inserted, namely:-

"(8) The permission for diversion of agricultural land for industrial development, educational institutions, Places of worship a Housing Project approved by the State Government, or for purpose of Horticulture under this section shall be deemed to have been granted when permission for purchase of agricultural land is accorded under section 109 of the Karnataka Land Reforms Act, 1961 (Karnataka Act 10 of 1962) for industrial development, educational institutions, Places of worship, a Housing Project approved by the State Government, or for purpose of Horticulture as the case may be subject to the payment of fees as may be prescribed."

By Order and in the name of the Governor of Karnataka,

S.B. GUNJIGAVI
Secretary to Government
Department of Parliamentary Affairs

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೨೮, ೨೦೧೪ (ಭಾದ್ರಪದ ೬, ಶಕ ವರ್ಷ ೧೯೩೬)	ನಂ. ೫೪೦
Part – IV-A	Bangalore, Thursday, August 28, 2014 (Bhadrapada 6, Shaka Varsha 1936)	No. 540

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 25 ಶಾಸನ 2014, ಬೆಂಗಳೂರು, ದಿನಾಂಕ: 28–08–2014

ದಿ ಕರ್ನಾಟಕ ಲ್ಯಾಂಡ್ ರೆವಿನ್ಯೂ (ಅಮೆಂಡ್‌ಮೆಂಟ್) ಬಿಲ್, 2014ಕ್ಕೆ 2014ರ ಆಗಸ್ಟ್ ತಿಂಗಳ 25ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:26 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 26 OF 2014

(First Published in the Karnataka Gazette Extra-ordinary on the Twenty eighth day of August 2014)

THE KARNATAKA LAND REVENUE (AMENDMENT) ACT, 2014

(Received the assent of the Governor on the Twenty fifth day of August 2014)

An Act further to amend the Karnataka Land Revenue Act, 1964.

Whereas, it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the sixty fifth year of the Republic of India, as follows:-

1. Short title and commencement.- (1) This Act may be called the Karnataka Land Revenue (Amendment) Act, 2014.

(2) It shall come into force at once.

2. Amendment of section 94-B.- In the Karnataka Land Revenue Act, 1964, (Karnataka Act 12 of 1964) in section 94B, in sub-section (1), for the words "within fourteen years", the words "within sixteen years" shall be and shall always be deemed to have been substituted.

By Order and in the name of the Governor of Karnataka,

S.B. GUNJIGAVI
Secretary to Government
Department of Parliamentary Affairs

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೨೮, ೨೦೧೪ (ಭಾದ್ರಪದ ೬, ಶಕ ವರ್ಷ ೧೯೩೬)	ನಂ. ೫೪೧
Part – IV-A	Bangalore, Thursday, August 28, 2014 (Bhadrapada 6, Shaka Varsha 1936)	No. 541

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 23 ಶಾಸನ 2014, ಬೆಂಗಳೂರು, ದಿನಾಂಕ: 28–08–2014

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2014 ಇದಕ್ಕೆ 2014ರ ಆಗಸ್ಟ್ ಇಪ್ಪತ್ತೈದನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2014ರ ಕರ್ನಾಟಕ ಅಧಿನಿಯಮ ಸಂಖ್ಯೆ:28 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2014ರ ಕರ್ನಾಟಕ ಅಧಿನಿಯಮ ಸಂಖ್ಯೆ: 28

(2014ರ ಆಗಸ್ಟ್ ತಿಂಗಳ 28ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014

(2014ರ ಆಗಸ್ಟ್ ತಿಂಗಳ 25ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 33) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 33) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

(i) (ಎ)ಖಂಡಕ್ಕೆ (ಎಎ) ಖಂಡ ಎಂದು ಮರುಸಂಖ್ಯೆ ನೀಡತಕ್ಕದ್ದು ಹಾಗೂ ಹಾಗೆ ಮರುಸಂಖ್ಯೆ ನೀಡಲಾದ (ಎಎ) ಖಂಡದ ಮೊದಲು, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಎ) "ಹೆಚ್ಚುವರಿ ಕಬ್ಬು ಬೆಲೆ" ಎಂದರೆ, ಮಂಡಲಿಯ ತೀರ್ಮಾನದ ಆಧಾರದ ಮೇಲೆ, 4ಎ ಪ್ರಕರಣದ ಅಡಿಯಲ್ಲಿ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಘೋಷಿಸಲ್ಪಟ್ಟ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಕಾರ್ಖಾನೆಯ ಅಧಿಭೋಗದಾರನು ಒಪ್ಪಿಸಲಾದ ಕಬ್ಬಿಗಾಗಿ ಕಬ್ಬು ಬೆಳೆಗಾರನಿಗೆ ಸಂದಾಯಮಾಡಲಾದ ಹೆಚ್ಚುವರಿ ಬೆಲೆ"

(ii) (ಇ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಇಎ) "ಕಬ್ಬಿನ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ)" ಎಂದರೆ, ಒಪ್ಪಿಸಲಾದ ಕಬ್ಬಿಗಾಗಿ, ಆ ವರ್ಷಕ್ಕಾಗಿ, ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿದ ಬೆಲೆ;"

(iii) (ಎನ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎನ್) "ವರ್ಷ" ಎಂದರೆ, ಜುಲೈ ಮೊದಲನೇ ದಿನದಂದು ಪ್ರಾರಂಭವಾಗಿ ಮುಂಬರುವ ವರ್ಷದ ಜೂನ್ ಮೂವತ್ತಕ್ಕೆ ಕೊನೆಗೊಳ್ಳುವ ವರ್ಷ."

3. 3ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಮಂಡಲಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಕ್ಕರೆ ಸಚಿವರು	–	ಅಧ್ಯಕ್ಷರು
(ಬಿ) ಕೃಷಿ ಸಚಿವರು	–	ಸದಸ್ಯರು
(ಸಿ) ಸಹಕಾರ ಸಚಿವರು	–	ಸದಸ್ಯರು
(ಡಿ) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ	–	ಸದಸ್ಯರು
(ಇ) ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	–	ಸದಸ್ಯರು
(ಎಫ್) ಕೃಷಿ ಆಯುಕ್ತರು	–	ಸದಸ್ಯರು
(ಜಿ) ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ	–	ಸದಸ್ಯರು
(ಹೆಚ್) ಯಾವೊಬ್ಬ ಕಬ್ಬು ಬೆಳೆಗಾರರ ಪೈಕಿಯಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐದಕ್ಕೆ ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ ವಿಭಾಗದಿಂದ ಕನಿಷ್ಠ ಒಬ್ಬ ಸದಸ್ಯರು) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಪ್ರತಿನಿಧಿಗಳು.	–	ಸದಸ್ಯರು
(ಐ) ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವವರ ಪೈಕಿಯಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಐದಕ್ಕೆ ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ ವಿಭಾಗದಿಂದ ಕನಿಷ್ಠ ಒಬ್ಬರು ಹಾಗೂ ಅವರಲ್ಲಿ ಕನಿಷ್ಠ ಇಬ್ಬರು ಸಹಕಾರಿ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳಾಗಿರತಕ್ಕದ್ದು) ಸಕ್ಕರೆ ಕಾರ್ಖಾನೆ ಅಧಿಭೋಗದಾರರ ಪ್ರತಿನಿಧಿಗಳು.	–	ಸದಸ್ಯರು
(ಜೆ) ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	–	ಸದಸ್ಯರು
(ಕೆ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ	–	ಸದಸ್ಯರು
(ಎಲ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು	–	ಸದಸ್ಯ ಕಾರ್ಯದರ್ಶಿ"

(ii) (2)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(2ಎ) ಮಂಡಲಿಯು ವಿಶೇಷ ಆಹ್ವಾನಿತರನ್ನು, ಅವರ ಅಭಿಪ್ರಾಯಗಳನ್ನು ಪಡೆಯುವುದು ಅವಶ್ಯವೆಂದು ಭಾವಿಸಿದಲ್ಲಿ, ಆಹ್ವಾನಿಸಬಹುದು."

(iii) (8)ನೇ ಉಪಪ್ರಕರಣದಲ್ಲಿ "ಕಬ್ಬು ಅರೆಯುವ ಹಂಗಾಮು ಪ್ರಾರಂಭವಾಗುವ ಮುಂಚೆ, ಕಬ್ಬು ಅರೆಯುವ ಹಂಗಾಮು ಮುಕ್ತಾಯವಾದ ನಂತರ ಮತ್ತು ಸಕ್ಕರೆ ಹಂಗಾಮಿನ ಅಂತ್ಯದಲ್ಲಿ" ಎಂಬ ಪದಗಳಿಗೆ "ವರ್ಷವು ಪ್ರಾರಂಭವಾದಾಗಿನಿಂದ ಮೊದಲುಗೊಂಡು ನಾಲ್ಕು ತಿಂಗಳುಗಳಿಗೆ ಒಮ್ಮೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) (10)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(11) ಕಬ್ಬು ನಿಯಂತ್ರಣ ಮಂಡಳಿಯ ಸರ್ಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳನ್ನು ನಿಯಮಿಸಬಹುದಾದ ದರಗಳಲ್ಲಿ ಸಂದಾಯ ಮಾಡತಕ್ಕದ್ದು.

(12) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿ, ಬೆಂಗಳೂರು ಇವರಿಗೆ ನಿಧಿಯನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮಂಡಲಿಯ ಕಾರ್ಯನಿರ್ವಹಣೆಗೆ ಅಗತ್ಯವಾದ ನಿಧಿಯನ್ನು ಸರ್ಕಾರವು ಆಯವ್ಯಯದಲ್ಲಿ ಕಲ್ಪಿಸತಕ್ಕದ್ದು."

4. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದ (ಎಫ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ವರ್ಷಕ್ಕಾಗಿ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ತೀರ್ಮಾನಿಸುವುದು;

(ಜಿ) 4ಬಿ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದ ಕಾರ್ಖಾನೆ ಇತ್ಯಾದಿಯ ಆದಾಯಗಳು ಮತ್ತು ವೆಚ್ಚಗಳು, ಲೆಕ್ಕಪತ್ರದ ಪುಸ್ತಕಗಳು, ಯಾವುದಾದರೂ ಇದ್ದಲ್ಲಿ, ಆ ವಿಷಯಗಳನ್ನೂ ಒಳಗೊಂಡಂತೆ, ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ವಿಚಾರಣೆಗೊಳಪಡಿಸುವುದು;

(ಎಚ್) ಆದಾಯ ಪ್ರಾಪ್ತಿಯಮೇಲೆ (revenue realisation) ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲಾದ ತಜ್ಞರ ಸಮಿತಿಯ ವರದಿಯನ್ನು ಪರಿಗಣಿಸುವುದು;

(ಐ) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು."

5. 4ಎ, 4ಬಿ, 4ಸಿ ಮತ್ತು 4ಡಿ ಹೊಸ ಪ್ರಕರಣಗಳ ಸೇರ್ಪಡೆ.–ಮೂಲ ಅಧಿನಿಯಮದ 4ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**4ಎ. ಕಬ್ಬಿನ ಹೆಚ್ಚುವರಿ ಕಬ್ಬು ಬೆಲೆಯ ಘೋಷಣೆ.–** (1) ಮಂಡಲಿಯ ನಿರ್ಧಾರದಂತೆ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಅಧಿಸೂಚನೆಯ ಮೂಲಕ, ವರ್ಷಕ್ಕಾಗಿ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

4ಬಿ. ಮಂಡಲಿಯು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕದ್ದು.– ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿನ ವಿಷಯಗಳಲ್ಲಿ ವಿಚಾರಣೆ ಮಾಡುವ ಸಂದರ್ಭದಲ್ಲಿ, ಸಿವಿಲ್‌ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ರಾಜ್ಯದ ಯಾವೊಬ್ಬ ವ್ಯಕ್ತಿಗೆ ಸಮನು ನೀಡುವುದು ಮತ್ತು ಆತನ ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಆತನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರಿಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ (ಅಫಿದಾವಿಟ್ಟು) ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ)ದಸ್ತಾವೇಜುಗಳು ಮತ್ತು ಸಾಕ್ಷಿಗಳ ವಿಚಾರಣೆಗಾಗಿ ಅಧಿಕಾರಾದೇಶಗಳನ್ನು (commission) ಹೊರಡಿಸುವುದು;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

4ಸಿ. ಆದಾಯ ಪ್ರಾಪ್ತಿಯನ್ನು ಲೆಕ್ಕ ಹಾಕುವುದಕ್ಕಾಗಿ ಸಮಿತಿ:– (1) ಸಕ್ಕರೆ ಕಾರ್ಖಾನೆಯಲ್ಲಿ ಆದಾಯ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಲ್ಲಿ ಮಂಡಲಿಗೆ ಸಲಹೆ ನೀಡಲು ಸರ್ಕಾರವು ಈ ಕೆಳಗಿನವರನ್ನೊಳಗೊಂಡ ತಜ್ಞ ಸಮಿತಿಯೊಂದನ್ನು ರಚಿಸತಕ್ಕದ್ದು,–

(ಎ) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು	– ಅಧ್ಯಕ್ಷರು
(ಬಿ) ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	– ಸದಸ್ಯರು
(ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ	– ಸದಸ್ಯರು
(ಡಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕಬ್ಬು ಕೃಷಿ ಶಾಸ್ತ್ರಜ್ಞ	– ಸದಸ್ಯರು
(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಅಥವಾ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಇಲ್ಲಿನ ಒಬ್ಬ ತಂತ್ರಜ್ಞ	– ಸದಸ್ಯರು
(ಎಫ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರು (ಹೆಚ್‌ಕ್ಯೂಎ)	–ಸದಸ್ಯ ಕಾರ್ಯದರ್ಶಿ

(2) ಸರ್ಕಾರದ ಇಚ್ಛೆಗೊಳಪಟ್ಟು, ಸಮಿತಿಯ ನಾಮನಿರ್ದೇಶಿತ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು.

(3) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕಬ್ಬು ಅರೆಯುವ ಹಂಗಾಮಿನ ಕೊನೆಯಲ್ಲಿ ಮಾಡಿದ ಕಾರ್ಖಾನೆವಾರು ಇಳುವರಿಯ ಪ್ರಕಟಣೆಯ ತರುವಾಯ ಪ್ರತಿಯೊಂದು ಸಕ್ಕರೆ ಕಾರ್ಖಾನೆಯ ಆದಾಯದ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಕ್ಕರೆ ಕಾರ್ಖಾನೆಯ ತಪಾಸಣೆ ಮಾಡುವ ಮತ್ತು ಹದಿನೈದು ದಿನಗಳೊಳಗಾಗಿ ಮಂಡಲಿಗೆ ವರದಿಯನ್ನು ಸಲ್ಲಿಸುವ ಅಧಿಕಾರವನ್ನು ತಜ್ಞ ಸಮಿತಿಯು ಹೊಂದಿರತಕ್ಕದ್ದು. ಮಂಡಲಿಯು, ವರದಿಯನ್ನು ಪರಿಗಣಿಸಿದ ಮೇಲೆ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಮಾಹಿತಿಯನ್ನು ಸಂಗ್ರಹಿಸಿದ ತರುವಾಯ, ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸತಕ್ಕದ್ದು.

4ಡಿ. ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ ಮಂಡಲಿಯು ಪರಿಗಣಿಸಬೇಕಾದ ಅಂಶಗಳು.– ಮಂಡಲಿಯು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಾಗ ಈ ಮುಂದಿನ ಅಂಶಗಳನ್ನು ಪರಿಗಣಿಸತಕ್ಕದ್ದು, ಎಂದರೆ :–

(1) ಒಪ್ಪಿಸಲಾದ ಕಬ್ಬಿನ ದಾಖಲಿಸಲಾದ ತೂಕ, ಅರೆದ ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯದ, ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉಪ–ಉತ್ಪತ್ತಿ ಎಂದರೆ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ ;

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ, ವರ್ಷದಲ್ಲಿ ಅರೆದ ಕಬ್ಬಿನಿಂದ ಪ್ರಾಪ್ತವಾದ ಆದಾಯವು, ಸಕ್ಕರೆಯ ವಾಸ್ತವ ಉತ್ಪಾದನೆ ಮತ್ತು ಅದರ ಉಪ–ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು, ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸೂಕ್ತವಾಗಿ ಮೌಲ್ಯಮಾಡಿದವುಗಳನ್ನು ಒಳಗೊಳ್ಳುತ್ತದೆ.

(2) ಆದಾಯ ಪ್ರಾಪ್ತಿಯಮೇಲೆ ಹೆಚ್ಚುವರಿ ಕಬ್ಬು ಬೆಲೆಯ ನಿರ್ಧಾರಣೆಗಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟ ತಜ್ಞ ಸಮಿತಿಯ ವರದಿ.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment WPP No. 297

(3) ನಿಯಮಿಸಬಹುದಾದ ಅಂಥ ಇತರ ಅಂಶಗಳು."

6. 7ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 7ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :–

"7. ಮೀಸಲು ಪ್ರದೇಶದಿಂದ ಕಬ್ಬಿನ ಖರೀದಿ.– ಮೀಸಲು ಪ್ರದೇಶದಿಂದ ಸಕ್ಕರೆ ಕಾರ್ಖಾನೆಗಳ ಮೂಲಕ ಕಬ್ಬಿನ ಖರೀದಿಯನ್ನು, ಕಾಲಕಾಲಕ್ಕೆ ತಿದ್ದುಪಡಿಯಾಗಿರುವ ಕಬ್ಬು (ನಿಯಂತ್ರಣ) ಆದೇಶ, 1966ರ ಅನ್ವಯ, ನಿಯಂತ್ರಣ ಮಾಡತಕ್ಕದ್ದು."

7. 8ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ದಾಖಲಿಸಲಾದ ತೂಕದ ಆಧಾರದ ಮೇಲೆ ಕಬ್ಬಿನ ಖರೀದಿ ಮತ್ತು ಸರಬರಾಜಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಮತ್ತು ಗುತ್ತಿಗೆಗಳನ್ನು, ಅಂಕೀಕೃತ (ಡಿಜಿಟೈಸ್ಡ್) ಮೆಟ್ರಿಕ್ ಪದ್ಧತಿ ತೂಕಗಳು ಮತ್ತು ಅಳತೆಗಳ ಅನುಸಾರವಾಗಿ ಮಾಡತಕ್ಕದ್ದು ಮತ್ತು ಸಕ್ಕರೆ ಕಾರ್ಖಾನೆಗಳ ಕಬ್ಬು ಪ್ರಾಂಗಣಗಳಲ್ಲಿ ಸ್ವಯಂಚಾಲಿತ ಫಲಕಗಳಲ್ಲಿ ಪ್ರದರ್ಶಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಯಾವುದೇ ನಿಖರವಲ್ಲದ, ಅನಧಿಕೃತವಾದ, ಪ್ರಮಾಣೀಕರಿಸಿಲ್ಲದ ತಕ್ಕಡಿಗಳು ಅಥವಾ ತೂಕಗಳು ಅಥವಾ ಯಾಂತ್ರಿಕ ತೂಕದ ಉಪಕರಣಗಳನ್ನು, ಕಾರ್ಖಾನೆಯ ಅಧಿಭೋಗದಾರನು ಅಥವಾ ಅವನ ಪರವಾಗಿ ವ್ಯಕ್ತಿಯು ಬಳಸತಕ್ಕದ್ದಲ್ಲ, ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ ಅಥವಾ ಕ್ವಿಂಟಾಲ್‌ನ 1/20ರ ಸಮೀಪದ ತೂಕಕ್ಕೆ ಹಾಗೂ ಬಹುವಿಧದ ಹಾಗೂ ಅದರ ಉಪ ವಿಧಗಳ ಮೆಟ್ರಿಕ್ ಪದ್ಧತಿಗೆ ಅನುಸಾರವಾಗಿರದ, ದಾಖಲಿಸಲಾದ ತೂಕವನ್ನು ಕಬ್ಬು ಮಾರಾಟಗಾರರಿಗೆ ಸುಲಭವಾಗಿ ಓದಲು ಸಾಧ್ಯವಾಗುವುದಿಲ್ಲವೋ ಅಂತಹ ತೂಕದ ಯಂತ್ರವನ್ನು ಉಪಯೋಗಿಸತಕ್ಕದ್ದಲ್ಲ:

ಪರಂತು, ಐದು ಕಿಲೋಗ್ರಾಂಗಳವರೆಗೆ ಅಥವಾ ಶೇಕಡಾ ಒಂದರಷ್ಟು ಅಂತರದ ತೂಕದ ವ್ಯತ್ಯಾಸ ಇವೆರಡರಲ್ಲಿ ಯಾವುದು ಕಡಿಮೆಯೋ ಅಂತಹ ವ್ಯತ್ಯಾಸವನ್ನು ಪರಿಗಣಿಸತಕ್ಕದ್ದಲ್ಲ:

ಮತ್ತು ಪರಂತು, ಮತ್ತಷ್ಟು ಸರಿಪಡಿಸಲು ಅಸಾಧ್ಯವಾದ ತೂಕದ ಯಂತ್ರವು ಸರಿಯಾದ ತೂಕದ ಶೇಕಡ ಒಂದರಷ್ಟು ವ್ಯತ್ಯಾಸ ತೂಗುವುದನ್ನು ಸಮರ್ಪಕವಾಗಿಲ್ಲವೆಂದು ಭಾವಿಸತಕ್ಕದ್ದಲ್ಲ."

8. 9ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಕಬ್ಬು ಬೆಳೆಗಾರರಿಗೆ ಪಾವತಿಯನ್ನು ಎರಡು ಹಂತಗಳಲ್ಲಿ ಮಾಡತಕ್ಕದ್ದು. ಮೊದಲ ಹಂತದಲ್ಲಿ, ಕಬ್ಬನ್ನು ಸರಬರಾಜು ಮಾಡಿದ ತಕ್ಷಣ, ಕಾರ್ಖಾನೆಯ ಅಧಿಭೋಗದಾರನು ಸಂಬಂಧಪಟ್ಟ ಕಾರ್ಖಾನೆಯ ಹಿಂದಿನ ವರ್ಷದ ಇಳುವರಿಯ ಆಧಾರದ ಮೇಲೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಪಾವತಿಸತಕ್ಕದ್ದು. ಕಬ್ಬು ಪಾವತಿಯ ಇತರ ಎಲ್ಲಾ ಷರತ್ತುಗಳು ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಇರತಕ್ಕದ್ದು.

(1ಎ) ಎರಡನೇ ಹಂತದಲ್ಲಿ, 4ಎ ಪ್ರಕರಣದ ಅಡಿಯಲ್ಲಿ ಘೋಷಣೆಯಾದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಕಾರ್ಖಾನೆಯ ಅಧಿಭೋಗದಾರನು ಹೆಚ್ಚುವರಿ ಕಬ್ಬು ಬೆಲೆಯ ಪಾವತಿಯನ್ನು ಮಾಡತಕ್ಕದ್ದು.

(1ಬಿ) ಈ ಅಧಿನಿಯಮದ ಅಡಿಯಲ್ಲಿ ಕಾರ್ಖಾನೆಯ ಅಧಿಭೋಗದಾರನು ಮಾಡುವ ಪ್ರತಿಯೊಂದು ಪಾವತಿಯನ್ನು, ಕಬ್ಬು ಬೆಳೆಗಾರನಿಗೆ ಆತನ ಬ್ಯಾಂಕ್ ಖಾತೆಯ ಮೂಲಕ ಮಾತ್ರವೇ ಪಾವತಿಸತಕ್ಕದ್ದು.

(1ಸಿ) ನ್ಯಾಯ ಮತ್ತು ಲಾಭದಾಯಕ ಬೆಲೆಯ ಸಂಬಂಧದಲ್ಲಿನ ಕಬ್ಬು (ನಿಯಂತ್ರಣ) ಆದೇಶ, 1966ರ ಬಾಕಿಗಳನ್ನು ವಸೂಲಿ ಮಾಡುವ ಉಪಬಂಧಗಳು ಹೆಚ್ಚುವರಿ ಕಬ್ಬು ಬೆಲೆಯ ಹಿಂಬಾಕಿಯ ವಸೂಲಾತಿಗೂ ಕೂಡಾ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಗುಂಜಿಗಾವಿ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ - V	**ಬೆಂಗಳೂರು, ಗುರುವಾರ, ಜುಲೈ ೩೧, ೨೦೧೪ (ಶ್ರಾವಣ ೯, ಶಕ ವರ್ಷ ೧೯೩೬)**	**ನಂ. ೫೧೨**
Part - V	**Bangalore, Thursday, July 31, 2014 (Shravana 9, Shaka Varsha 1936)**	**No. 512**

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ಸಿ3[1]ಪ್ರಾಶಿನೇ:ರಾ.ಉಚ್ಚ:03:2009-10, ಬೆಂಗಳೂರು, ದಿನಾಂಕ: 31ನೇ ಜುಲೈ, 2014

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ / ಸಹಶಿಕ್ಷಕಿ ವೃಂದದ ಹುದ್ದೆಗಳಿಗೆ ಅಂದ/ಮಂದದೃಷ್ಟಿಯ ಅಭ್ಯರ್ಥಿಗಳಿಂದ ವಿಶೇಷ ನೇರ ನೇಮಕಾತಿಗೆ ಜಿಲ್ಲಾ ಮಟ್ಟದ [ಸಂಯುಕ್ತ ಸ್ಪರ್ಧಾತ್ಮಕ] ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ: ಇಡಿ 412/ಪಿಬಿಎಸ್/2012, ದಿನಾಂಕ: 14.03.2014.

2] ಜಿಲ್ಲಾ ಉಪನಿರ್ದೇಶಕರುಗಳ ಅಧಿಸೂಚನೆ ದಿ: 16-07-2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1ರ ಸರ್ಕಾರದ ಪತ್ರದಲ್ಲಿ 49 ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ಹುದ್ದೆಗಳಿಗೆ ಅಂದ/ಮಂದದೃಷ್ಟಿಯ ಅಭ್ಯರ್ಥಿಗಳಿಂದ ವಿಶೇಷ ನೇರ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ. ಅದರಂತೆ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಬೆಂಗಳೂರುಉತ್ತರ, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಹಾಸನ, ಬೆಳಗಾವಿ, ಬಿಜಾಪುರ, ಚಿಕ್ಕೋಡಿ, ಧಾರವಾಡ, ಹಾವೇರಿ, ಗುಲ್ಬರ್ಗಾ, ಬಳ್ಳಾರಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ ಜಿಲ್ಲೆಯವರು ಈ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಈ ಅಧಿಸೂಚನೆಯಲ್ಲಿ ಪ್ರಶ್ನೆ ಪತ್ರಿಕೆ : ವಿಷಯ ಹಾಗೂ ಅಂಕಗಳು ಈ ಕೆಳಗಿನಂತಿರುತ್ತವೆ ಎಂದು ತಿಳಿಸಲಾಗಿದೆ.

ವಿಷಯ ಮತ್ತು ನಿಗದಿಪಡಿಸಿರುವ ಗರಿಷ್ಠ ಅಂಕಗಳ ವಿಂಗಡಣೆ ಕೆಳಗಿನಂತಿದೆ.

ಕ್ರ.ಸಂ.	ವಿಷಯ	ಅಂಕಗಳು
01.	ಶಿಶು ಮನೋವಿಜ್ಞಾನ ಮತ್ತು ವಿಕಸನ.	30
02.	ಭಾಷೆ: ಕನ್ನಡ / ಉರ್ದು / ಮರಾಠಿ / ತಮಿಳು / ತೆಲಗು / ಮಲಯಾಳಂ	30
03.	ಆಂಗ್ಲ ಭಾಷೆ	30
04.	ಪರಿಸರ ಅಧ್ಯಯನ (ವಿಜ್ಞಾನ ಮತ್ತು ಸಮಾಜ ವಿಜ್ಞಾನ)	30
05.	ಗಣಿತ	30
	ಒಟ್ಟು	**150**

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಈಗ ನಡೆಸುತ್ತಿರುವ ನೇಮಕಾತಿಯಲ್ಲಿ ದೃಷ್ಟಿ ಮಾಂಧ್ಯದವರು ಮತ್ತು ಅಂಧರಿಗೆ ಮೀಸಲಾಗಿರುವುದರಿಂದ ನಿಗದಿಪಡಿಸಿರುವ ವಿಷಯಗಳಲ್ಲಿ ಮತ್ತು ಪ್ರಶ್ನೆಗಳ ಸಂಖ್ಯೆಯಲ್ಲಿ ಈ ಕೆಳಗಿನಂತೆ ಬದಲಾವಣೆ ಮಾಡಲಾಗಿದೆ.

ಈ ಕೆಳಗಿನ ವಿಷಯಗಳಂತೆ ಪರೀಕ್ಷೆ ನಡೆಸಲಾಗುವುದು.

ವಿಷಯ ಮತ್ತು ನಿಗದಿಪಡಿಸಿರುವ ಗರಿಷ್ಠ ಅಂಕಗಳ ವಿಂಗಡಣೆ ಕೆಳಗಿನಂತಿದೆ.

ಕ್ರ.ಸಂ.	**ವಿಷಯ**	**ಅಂಕಗಳು**
01.	ಶಿಶು ಮನೋವಿಜ್ಞಾನ ಮತ್ತು ವಿಕಸನ.	50
02.	ಭಾಷೆ: ಕನ್ನಡ / ಆಂಗ್ಲ ಭಾಷೆ / ಉರ್ದು / ಮರಾಠಿ / ತಮಿಳು / ತೆಲಗು / ಮಲಯಾಳಂ	50
03.	ಸಮಾಜ ವಿಜ್ಞಾನ	50
	ಒಟ್ಟು	**150**

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59